## ಸ್ಟೈಲ್-ಪವರ್ ಗುಂಗಲ್ಲಿ ಮಳೆ ಹುಡುಗ!

'ಕನ್ನಡ ಚಿತ್ರರಂಗದಲ್ಲಿ ಕಿಂಗ್ ಎಂದು ಗುರ್ತಿಸಿಕೊಳ್ಳುವುದು ನನಗಿಷ್ಟವಿಲ್ಲ. ಸ್ಟೈಲ್ ಕಿಂಗ್ ಎಂದು ಕರೆಸಿಕೊಳ್ಳುವುದೇ ಹೆಚ್ಚು ಖುಷಿ ಕೊಡುವಂತಹದ್ದು' ಎಂದು ಗಣೇಶ್ ಹೇಳುವಾಗ, ಪಕ್ಕದಲ್ಲಿ ಅವರ ಪತ್ನಿ ಶಿಲ್ಪಾ ಅವರೂ ಇದ್ದರು. ಗಂಡನ 'ಸ್ಟೈಲ್' ವ್ಯಾಖ್ಯಾನವನ್ನು ಅವರು ಸ್ಮೈಲ್ ಮೂಲಕ ಅನುಮೋದಿಸಿದರು. ಅಂದ ಹಾಗೆ, ಅದು 'ಸ್ಟೈಲ್ ಕಿಂಗ್' ಚಿತ್ರದ ಪ್ರೋಮೊ ಬಿಡುಗಡೆ ಸಮಾರಂಭ.

'ರೋಮಿಯೊ'ದಂಥ ಲವಲವಿಕೆಯ ಪ್ರೇಮಕಥೆಯ ಸಿನಿಮಾ ಮಾಡಿದ್ದ ಪಿ.ಸಿ. ಶೇಖರ್ 'ಸ್ಟೈಲ್ ಕಿಂಗ್' ಚಿತ್ರದ ನಿರ್ದೇಶಕರು. 'ರೋಮಿಯೊ' ಸಂದರ್ಭದಲ್ಲೇ ಅವರೊಳಗೆ ಈ ಕಥೆ ಮೊಳೆತಿತ್ತಂತೆ. 'ನಿಮ್ಮೊಳಗೊಂದು ವಿಶಿಷ್ಟವಾದ ಸೈಲೆನ್ಸ್ ಇದೆ. ಅದನ್ನು ಈವರೆಗೂ ಯಾರೂ ಗುರ್ತಿಸಿಲ್ಲ' ಎಂದು ಗಣೇಶ್‌ಗೆ ಶೇಖರ್ ಹೇಳಿದ್ದರಂತೆ. ಈ ಮೌನ ಸಂಭಾಷಣೆಯೇ ಕಥೆಯ ಎಳೆಯಾಗಿ, 'ಸ್ಟೈಲ್ ಕಿಂಗ್' ಚಿತ್ರಕಥೆಯಾಗಿ ಈಗ ಸಿನಿಮಾ ಆಗುವ ಹಂತಕ್ಕೆ ಬಂದಿದೆ.

ಶೇಖರ್ ಮೊದಲು ತಮ್ಮ ಚಿತ್ರಕ್ಕೆ ಯೋಚಿಸಿದ್ದು 'ಕಿಂಗ್' ಎನ್ನುವ ಶೀರ್ಷಿಕೆಯನ್ನು. ಆದರೆ, ಕಿಂಗ್ ಎನ್ನಿಸಿಕೊಳ್ಳುವುದು ತುಂಬಾನೇ ಕಷ್ಟ ಎನ್ನುವ ಯೋಚನೆ ಗಣೇಶ್ ಮನಸ್ಸಿನಲ್ಲಿ ಬಂದಿರಬೇಕು; ಅವರು ಚಿತ್ರದ ಶೀರ್ಷಿಕೆಗೆ 'ಸ್ಟೈಲ್ ಕಿಂಗ್' ಎನ್ನುವ ತಿದ್ದುಪಡಿ ಸೂಚಿಸಿದರು. ಕೊನೆಗೆ ಈ ತಿದ್ದುಪಡಿಯೇ ಅಂತಿಮವಾಯಿತು. ಅಂದಹಾಗೆ, ಈ ಚಿತ್ರದಲ್ಲಿ ಗಣೇಶ್ ದ್ವಿಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಸ್ಟೈಲ್ ಹಾಗೂ ಪವರ್ ಈ ಪಾತ್ರಗಳ ವ್ಯಕ್ತಿತ್ವವನ್ನು ಸೂಚಿಸುತ್ತಿದ್ದು, ಈ ಭಾವವನ್ನೇ ಶೀರ್ಷಿಕೆಯೂ ಧ್ವನಿಸುವಂತಿದೆ.

ಗಣೇಶ್‌ಗೆ ನಾಯಕಿಯಾಗಿ ನಟಿಸುತ್ತಿರುವ ರಮ್ಯಾ ನಂಬಿಸನ್ ಅವರಿಗೆ 'ಸ್ಟೈಲ್ ಕಿಂಗ್' ಐವತ್ತನೇ ಚಿತ್ರವಂತೆ. ಈಗಾಗಲೇ ಮಲಯಾಳಂ, ತೆಲುಗು, ತಮಿಳಲ್ಲಿ ನಟಿಸಿರುವ ಈ ಚೆಲುವೆ ಒಳ್ಳೆಯ ಗಾಯಕಿಯೂ ಹೌದಂತೆ. ನಟನೆಯ ಜೊತೆಗೆ ನಾಯಕಿಯಿಂದ ಹಾಡೊಂದನ್ನು ಹಾಡಿಸಲು ಕೂಡ ನಿರ್ದೇಶಕರು ಉದ್ದೇಶಿಸಿದ್ದಾರೆ.






## ಕೇಳಿ ಪ್ರೇಮಿಗಳೇ...

'ರವಿಚಂದ್ರನ್ ನನ್ನ ಗುರುಗಳು' ಎಂದು ಹೇಳಿಕೊಳ್ಳುವ ನಿರ್ದೇಶಕ ಮಂಜು ಮಸ್ಕಲ್‌ಮಟ್ಟಿ, ತಮ್ಮ ಗುರುಪ್ರೀತಿಯ ರೂಪದಲ್ಲಿ 'ಯುಗಪುರುಷ' ಎನ್ನುವ ಸಿನಿಮಾ ಮಾಡುತ್ತಿದ್ದಾರೆ. 'ಮನಸುಗಳ ಮಾತು ಮಧುರ' ಹಾಗೂ 'ಗೌರಿಪುತ್ರ' ಸಿನಿಮಾಗಳ ಮಂಜು ಅವರಿಗೆ ನಿರ್ದೇಶಕರಾಗಿ ಇದು ಮೂರನೇ ಸಿನಿಮಾ. ರವಿಚಂದ್ರನ್, ಖುಷ್ಬೂ ಹಾಗೂ ಮೂನ್‌ಮೂನ್ ಸೆನ್ ನಟನೆಯ 'ಯುಗಪುರುಷ' ಇಪ್ಪತ್ತೈದು ವರ್ಷಗಳ ಹಿಂದೆ ತೆರೆಕಂಡ ಸಿನಿಮಾ. ಆ ಚಿತ್ರದಲ್ಲಿನ ಕನಸು ಹಾಗೂ ರಂಗು ಹೊಸ ಚಿತ್ರದಲ್ಲೂ ಇರಲಿದೆ ಎನ್ನುವ ಸೂಚನೆಯನ್ನು ಮಸ್ಕಲ್‌ಮಟ್ಟಿ ಅವರ ಮಾತುಗಳಲ್ಲಿ ಕಾಣಬಹುದು.

'ಯುಗಪುರುಷ' ಸಾಹಸ ಹಾಗೂ ಪ್ರೇಮದ ಎಳೆಗಳು ಮಿಳಿತಗೊಂಡಿರುವ ಕಥನ ಎನ್ನುವುದು ನಿರ್ದೇಶಕರ ಬಣ್ಣನೆ. ಈ ಭಾವ–ಬಣ್ಣಗಳನ್ನು ಅಭಿವ್ಯಕ್ತಿಸಲಿಕ್ಕಾಗಿ ಅವರು ಅರ್ಜುನ್ ದೇವ್ ಮತ್ತು ಪೂಜಾ ಝವೇರಿ ಎನ್ನುವ ಹೊಸ ಕಲಾವಿದರನ್ನು ನೆಚ್ಚಿಕೊಂಡಿದ್ದಾರೆ. ಹಿರಿಯ ನಟ ದೇವರಾಜ್ ಅವರಿಗೆ ಚಿತ್ರದಲ್ಲಿ ಪ್ರಮುಖ ಪಾತ್ರ ಇದೆಯಂತೆ. ಮೂರು ಆಯಾಮಗಳ ಈ ಪಾತ್ರ ಸಿನಿಮಾದ ವಿಶೇಷಗಳಲ್ಲೊಂದು. ನಟ ನವೀನ್‌ಕೃಷ್ಣ ಸಂಭಾಷಣೆ ಬರೆದಿರುವುದು ಚಿತ್ರದ ಮತ್ತೊಂದು ವಿಶೇಷ.

ಈಗಾಗಲೇ ಮಸ್ಕಲ್‌ಮಟ್ಟಿ ಅವರ 'ಯುಗಪುರುಷ' ಚಿತ್ರದ ಚಿತ್ರೀಕರಣ ಮುಕ್ಕಾಲು ಪಾಲು ಮುಗಿದಿದೆ. ಶರತ್‌ಕುಮಾರ್ ಛಾಯಾಗ್ರಹಣ ಹಾಗೂ ಧನಪಾಲ್ ಸಿಂಗ್ ರಜಪೂತ್ ಅವರ ಸಂಗೀತ ಚಿತ್ರಕ್ಕಿದೆ.

■ ರಘು